ಕಾಣುವುದಿಲ್ಲ. ನೀಲಿ ಆಗಸ ಅನಂತ ಮತ್ತು ಅದು ಬದಲಾಗುವುದೂ ಇಲ್ಲ. ಇದು ವಿಮಾನ ಮುಂದಕ್ಕೆ ಚಲಿಸುತ್ತಿಲ್ಲ ಎಂಬ ಭಾವನೆಯನ್ನು ಮೂಡಿಸುತ್ತದೆ. ವಾಸ್ತವವಾಗಿ ಗಂಟೆಗೆ ನಾಲ್ಕು ನೂರು ಮೈಲುಗಳಿಗೂ ಮೀರಿದ ವೇಗದಲ್ಲಿ ದೂರವನ್ನು ಕ್ರಮಿಸುತ್ತಿದೆ ಎಂಬುದನ್ನು ನಂಬುವುದು ಕಷ್ಟ!

ವಿಮಾನ ಮೇಲೇರಿದ ಮೇಲೆ ಗಗನಸಖಿಯರು ತಮ್ಮ ಸೇವೆಯನ್ನು ಶುರು ಮಾಡಿದರು. ಮೊದಲಿಗೆ ಬಿಸಿಯಾದ ಪುಟ್ಟ ಟವೆಲ್ ನೀಡಿದರು. ಅದರಿಂದ ಮುಖ, ಕೈಗಳನ್ನು ಒರೆಸಿಕೊಂಡಿದ್ದಕ್ಕೆ ದೇವರಾಜುಗೆ ಹಿತವನ್ನಿಸಿತು. ನಂತರ ಸಮಯಕ್ಕೆ ತಕ್ಕನಾದ ಆಹಾರ ಕೊಡುತ್ತಾರೆ. ಕುಡಿಯಲು ನೀರು, ಕಾಫಿ, ಇಷ್ಟಪಟ್ಟವರಿಗೆ ವೈನು, ವಿಸ್ಕಿ ಮುಂತಾದ ಪಾನೀಯಗಳನ್ನೂ ನೀಡುತ್ತಾರೆ. ಎಲ್ಲಾ ಮುಗಿದ ನಂತರ ದೂರದ ಪ್ರಯಾಣವಾದರೆ ಪ್ರಯಾಣಿಕರು ನಿದ್ರಿಸುತ್ತಾರೆ, ಕೆಲವರು ಟೀವಿ ನೋಡುತ್ತಾರೆ, ಇನ್ನೂ ಕೆಲವರು ಸಂಗೀತ ಕೇಳುತ್ತಾರೆ. ಎಲ್ಲರಿಗೂ ಪ್ರತ್ಯೇಕ ವ್ಯವಸ್ಥೆಗಳಿರುವುದರಿಂದ ಅವರವರ ಅಭಿರುಚಿಗೆ ತಕ್ಕಂತಹ ಮಾಧ್ಯಮಗಳನ್ನು ಉಪಯೋಗಿಸುತ್ತಾರೆ. ಇದೆಲ್ಲವನ್ನೂ ದೇವರಾಜು ಫ್ರಾಂಕ್‌ಫರ್ಟಿಗೆ ಹೋಗುವಾಗಲೇ ಗಮನಿಸಿದ್ದರು.

ದೇವರಾಜು ಬೆಳಗಿನಿಂದ ಆತಂಕದಲ್ಲೇ ವಿಮಾನದಲ್ಲಿನ ಎಲ್ಲ ಸೇವೆಗಳನ್ನೂ ಸ್ವೀಕರಿಸಿದ್ದರು. ತಡವಾಗಿ, ಆತುರದಿಂದ ವಿಮಾನ ನಿಲ್ದಾಣ ತಲುಪಿದ್ದರು. ಆಯಾಸವಾಗಿತ್ತು. ಹೊಟ್ಟೆಗೆ ಆಹಾರ ಬಿದ್ದೊಡನೆಯ ನಿದ್ರೆಗೆ ಶರಣಾದರು.

ಎಷ್ಟು ಹೊತ್ತು ನಿದ್ರಿಸಿದೆ ಎನ್ನುವುದು ನೆನಪಾಗದಂತೆ ನಿದ್ರಿಸಿದ್ದರು. ಆಗಲೇ ಇದ್ದಕ್ಕಿದ್ದಂತೆ ಎಚ್ಚರವಾಯಿತು. ಕಾರಣ ವಿಮಾನ ತುಂಬಾ ಅಲ್ಲಾಡುತ್ತಿತ್ತು. ಹದಗೆಟ್ಟ ರಸ್ತೆಯ ಮೇಲೆ ವೇಗವಾಗಿ ಓಡುವ ಕಾರು ಎತ್ತೆತ್ತಿ ಹಾಕಿದ ಅನುಭವ! ಆ ಕಾರಣಕ್ಕೇ ದೇವರಾಜು ಎಚ್ಚರಗೊಂಡಿದ್ದರು.

"ದಯಮಾಡಿ ಎಲ್ಲರೂ ಸೀಟ್ ಬೆಲ್ಟುಗಳನ್ನು ಹಾಕಿಕೊಳ್ಳಿ. ಹೊರಗೆ ಹವಾಮಾನ ತುಂಬಾ ಪ್ರತಿಕೂಲವಾಗಿದೆ. ಅನಾನುಕೂಲಕ್ಕಾಗಿ ಕ್ಷಮಿಸಿ. ನಿಮ್ಮನ್ನು ಆದಷ್ಟು ಸುಖವಾಗಿ ಕರೆದೊಯ್ಯುವ ಜವಾಬ್ದಾರಿ ನಮ್ಮದು. ದಯಮಾಡಿ ಸಹಕರಿಸಿ" ಧ್ವನಿವರ್ಧಕದಲ್ಲಿ ಪೈಲಟ್‌ನ ಮಾತುಗಳು ಕೇಳಿದವು. ದೇವರಾಜು ತಾವು ಸೀಟ್ ಬೆಲ್ಟ್ ಹಾಕಿಕೊಂಡಿರುವುದನ್ನು ಖಾತ್ರಿಪಡಿಸಿಕೊಂಡರು.

"ದಿಸ್ ಇಸ್ ವೆರಿ ಬ್ಯಾಡ್" ಪಕ್ಕದ್ದಲ್ಲಿದ್ದ ವಿದೇಶಿ ಪ್ರಯಾಣಿಕ ಗೊಣಗಿದ.

ಆತ ಯಾಕೆ ಹಾಗೆ ಹೇಳಿದನೆಂದು ದೇವರಾಜುಗೆ ಅರ್ಥವಾಗಲಿಲ್ಲ. ಯಾವ ಕಾರಣಕ್ಕೋ ಇದ್ದಕ್ಕಿದ್ದಂತೆ ಮನೆ ಮಡದಿ ಮಕ್ಕಳ ನೆನಪಾಯಿತು. ಅದಕ್ಕೆ ಕಾರಣ ತಿಳಿಯಲಿಲ್ಲ. ಮತ್ತೆ ಕಣ್ಮುಚ್ಚಿ ಮಲಗಲು ಪ್ರಯತ್ನಿಸಿದರು. ವಿಮಾನದ ಹೊಯ್ದಾಟ ಅತಿಯಾಗಿತ್ತು! ಆ ಅನುಭವ ಅವರಿಗೆ ಜರ್ಮನಿಗೆ ಹೋಗುವಾಗ ಆಗಿರಲಿಲ್ಲ. ಸುಖವಾಗಿ ತಲುಪಿದ್ದರು. ಆದರೆ ಈಗ ಬರುವಾಗಿನ ಅನುಭವವೇ ಬೇರೆ. ಓಡಾಡುತ್ತಿದ್ದ ಗಗನಸಖಿಯರೆಲ್ಲಾ ಒಂದು ಕಡೆ ತಮ್ಮ ನಿಗದಿತ ಸೀಟುಗಳಲ್ಲಿ ಕೂತರು. ಅವರ ಮುಖದಲ್ಲಿ ಕೊಂಚ ಆತಂಕವಿತ್ತು! ಅದನ್ನು ದೇವರಾಜು ಗುರುತಿಸಿದರು.

ಮುಂದಿನ ನಾಲ್ಕು ಸಾಲಿನ ಅಂತರದಲ್ಲಿ ಮಗುವೊಂದು ಜೋರಾಗಿ ಅಳುತ್ತಿತ್ತು. ಅದರ ತಾಯಿ ಸಮಾಧಾನ ಮಾಡುತ್ತಿದ್ದಳು. ವಿಮಾನ ಬಲಭಾಗಕ್ಕೆ ತೀರಾ ಬಾಗಿ ಕೆಲವು ನಿಮಿಷಗಳ ನಂತರ ಸಮಸ್ಥಿತಿಗೆ ಬಂತು! ಆ ಕಾರಣಕ್ಕೋ ಏನೋ ಮುಂದಿನ ಕೆಲವು ಸೀಟುಗಳ